# ರಂಗನ ನೋಡಿರೆ ರಾಜಕುವರ

(version – 2)

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
4. **Note:** There are two versions available which have different wordings and no. of stanzas. Both the lyrics are being followed by many singers. Hence, they are listed separately as Version – 1 and Version – 2.
5. **Note:** Version – 1 is as per Ref. 1 and Ref. 2. Singer has followed these wordings.
6. **Note:** Version – 2 is as per Ref. 3. Singer has followed these wordings.
7. **Note:** Ankita is same in both the versions.
8. **Note:** One more observation: As per authors of Ref. 2, Version-1 song may be written/sung in Tirupati. But, as per authors of Ref. 3, Version-2 song may be written/sung in Srirangapatna, Karnataka.

ರಾಗ: ಭೈರವಿ ತಾಳ: ಅಟ

ರಂಗನ ನೋಡಿರೆ ರಾಯಚೆನ್ನಿಗ ನರ-
ಸಿಂಗನ ದೇವಕಿ ದೇವಿಯ ಸುತನ ॥ ಪ ॥

ಥಳಥಳಿಸುವ ನಗುಮೊಗದ ಚೆನ್ನಿಗನ
ಪೊಳೆವ ವಜ್ರದ ಕಿರೀಟವಿಟ್ಟವನ
ಪ್ರಳಯ ಕಾಲದಿ ವಟಪತ್ರ ಶಯನನ
ನಳಿನಭವನ ನಾಭಿಯಲ್ಲಿ ಪೆತ್ತವನ ॥ ೧ ॥

ಆಣಿ ಮುತ್ತಿನ ದಂಡು ಮಕರ-ಕುಂಡಲನ

ಭಾನು ಪ್ರಭೆಯ ಭುಜಕೀರ್ತಿಯೊಪ್ಪುವನ
ಕಾಣಿಸೆ ಅಪರಂಜಿ ಕಡಗ ಕಂಕಣ ಹೊಸ
ಮಾಣಿಕದುಂಗುರವಿಟ್ಟು ಮೆರೆವನ || ೨ ||

ಕಮಲಾ-ಮನೋಹರ ಕಮಲಜ ಪಿತನ
ರಮಣಿಗೆ ಪಾರಿಜಾತವನೇ ತಂದವನ
ಕ್ರಮದಿಂದ ಭಸ್ಮಾಸುರನ ಕೊಂದವನ
ರಮೆಯಾಣ್ಮನೆನ್ನಲು ಇಹಪರವೀವನ || ೩ ||

ಶುಕ್ರವಾರದ ಪುಲಕು ಪೂಜೆಗೊಂಬುವನ
ಸಕ್ಕರೆ-ಹಾಲು ಬೆಣ್ಣೆಯ ಮೆಲ್ಲುವವನ
ಗಕ್ಕನೆ ಸುರರಿಗೆ ಅಮೃತವಿತ್ತವನ
ರಕ್ಕಸದಲ್ಲಣ ರಾವಣಾಂತಕನ || ೪ ||

ಪಾಪವಿನಾಶದಿ ಸ್ನಾನವ ಮಾಡಿ
ಪಾಪಗಳೆಲ್ಲ ಬೇಗನೆ ಬಿಟ್ಟು ಓಡಿ
ಈ ಪರಿಯಿಂದಲಿ ಮೂರುತಿ ನೋಡಿ
ಶ್ರೀಪತಿ ಪುರಂದರ ವಿಠಲನ ಪಾಡಿ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ದಾಸರು ಬೇರೆಬೇರೆ ವಿಷ್ಣು ಕ್ಷೇತ್ರಗಳನ್ನು ಯಾತ್ರೆ ಮಾಡುತ್ತಾ ಅಲ್ಲಲ್ಲಿಯ ವಿಗ್ರಹಗಳನ್ನು ಕುರಿತು ಹಾಡುಗಳನ್ನು ರಚಿಸಿದ್ದಾರೆ.

**ಶ್ರೀರಂಗಾಪಟ್ನದಲ್ಲಿರುವ** ರಂಗನಾಥನನ್ನು ಕುರಿತು ರಚಿಸಿದ ಕೀರ್ತನೆ.

**ಚೆನ್ನಿಗ** = ಚೆಲುವ

**ನಳಿನಭವ** = ಬ್ರಹ್ಮ

**ಆಣಿಮುತ್ತು** = ದೊಡ್ಡ ಮುತ್ತು

**ಮಕರ ಕುಂಡಲ** = ಮೊಸಳೆಯ ಆಕಾರದ ಕಿವಿಯ ಆಭರಣ

**ಭುಜಕೀರ್ತಿ** = ಭುಜಕಿರೀಟ

**ಅಪರಂಜಿ** = ಶುದ್ಧ ಬಂಗಾರ

**ರಮಣಿ** = ರುಕ್ಮಿಣಿ

**ಪುಲುಕು ಪೂಜೆ** = (ಪೂಜೆಯ ಪ್ರಕಾರ) ಪುನುಗು ಪೂಜೆ ಇರಬಹುದೆ ?

**ತಲ್ಲಣ** = ಪೀಡಕ

**ಪಾಪವಿನಾಶ** = ಕಾವೇರಿಯಲ್ಲಿಯ ಒಂದು ತೀರ್ಥ. (ತಿರುಪತಿಯಲ್ಲಿಯೂ ಪಾಪವಿನಾಶನವೆಂಬ ಹೆಸರಿನ ತೀರ್ಥವಿದೆ)

**ಬಾಪುರಿ** – ಬಾಹುಪೂರ, ತೋಳಿನಲ್ಲಿ ತೊಡುವ ಬಳೆ.

**ಗಕ್ಕನೆ** – ಇದ್ದಕ್ಕಿದ್ದಂತೆ, ಪೂರ್ವಸೂಚನೆಯಿಲ್ಲದೆ; ಸಮುದ್ರ ಮಥನದ ಸಂದರ್ಭದಲ್ಲಿ ವಿಷ್ಣುವು ಮೋಹಿನಿಯಂತೆ ಬಂದು ದೇವತೆಗಳಿಗೆ ಅಮೃತವನ್ನು ದೊರಕಿಸಿಕೊಟ್ಟು ಅಸುರರ ಕೈತಪ್ಪಿಸಿ ಕಣ್ಮರೆಯಾದ ಹಿನ್ನೆಲೆ.

**ಈ ಪರಿ** – ಈ ರೀತಿಯಲ್ಲಿರುವ ಮೂರ್ತಿಯನ್ನು.

**Classification:** Keerthane
**Ankita:** purandara vittala
**Location:** Srirangapatna, Karnataka
**Category:** Krishna Stuti, Vishnu Stuti
**Sub-Category:** ranga, Krishna, Devaki, Narasimha, abharana, pralaya, Aladele, bangara, ungura, padma, brahma, asura, Rukmini, puje, sakkare, benne, sura, amruta, asura, ravana, papa, snana, sripati, pArijAtha,
**Pravachana:** NA
**Explanation:** NA